(ಆ) ವಿಷಯ :- ಕುಡಿಯುವ ನೀರಿನ ಟಾಸ್ಕ್‌ಫೋರ್ಸ್ ರಚನೆ ಬಗ್ಗೆ :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ವ್ಯವಸ್ಥೆ ನೋಡಿಕೊಳ್ಳುವುದಕ್ಕಾಗಿ ಶಾಸಕರ ಅಧ್ಯಕ್ಷತೆಯಲ್ಲಿ Task Force ಸಮಿತಿಯನ್ನು ಪ್ರತಿ ಕ್ಷೇತ್ರಗಳಲ್ಲಿ ರಚಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು. ನಾಳೆ ಮತ್ತು ನಾಡಿದ್ದು ಇಲ್ಲಿ ಸದನ ಮುಗಿದ ನಂತರ ನಾವೆಲ್ಲಾ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಬೇಕಾಗುತ್ತದೆ. ಮುಂದಿನ ಎರಡು ತಿಂಗಳುಗಳಲ್ಲಿ ಪ್ರತಿ ಕ್ಷೇತ್ರದಲ್ಲೂ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗುತ್ತದೆ. ಆದ್ದರಿಂದ, ಹಿಂದೆ ಮಾಡಿದ್ದಂತೆ, ಮಾನ್ಯ ಮುಖ್ಯಮಂತ್ರಿಗಳು ನೀಡಿದ ಭರವಸೆಯಂತೆ, ಪ್ರತಿ ಕ್ಷೇತ್ರದಲ್ಲೂ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿಗಳನ್ನು ಮಾಡಬೇಕು.

ಪ್ರತಿ ಕ್ಷೇತ್ರದ Task Force ಸಮಿತಿಗಳಿಗೂ ಕನಿಷ್ಟ 5 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಪಕ್ಷಬೇಧ ಮರೆತು ಎಲ್ಲಾ ಕ್ಷೇತ್ರಗಳಿಗೂ ಹಣ ಬಿಡುಗಡೆ ಮಾಡಬೇಕು. ರಾಜ್ಯದ ಎಲ್ಲಾ ಕ್ಷೇತ್ರಗಳಿಗೂ ಸೇರಿ ಕನಿಷ್ಟ 150 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕಾಗುತ್ತದೆ. ಸರ್ಕಾರದವರು ಇದುವರೆಗೂ ಸ್ಪಷ್ಟವಾಗಿ, ನೇರವಾಗಿ ಶಾಸಕರೇ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರೆಂದು ಹೇಳಿಲ್ಲ. ಮಾನ್ಯ ಉದಾಸಿಯವರು ಮತ್ತು ಮಾನ್ಯ ರವೀಂದ್ರನಾಥ್‌ರವರು ಸದನದಲ್ಲಿದ್ದಾರೆ. ಆ ಬಗ್ಗೆ ಇಲ್ಲಿ ಅವರು ಸ್ಪಷ್ಟವಾಗಿ ಹೇಳಬೇಕು. ಇಲ್ಲದಿದ್ದರೆ ಕ್ಷೇತ್ರಗಳಲ್ಲಿ ಬಹಳ ಗಂಭೀರವಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಸರ್ಕಾರದ ಕಡೆಯಿಂದ ಈ ಬಗ್ಗೆ ತಾವು ಉತ್ತರ ಕೊಡಿಸಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :- ಇದಕ್ಕೆ ಯಾರು ಉತ್ತರ ಹೇಳುತ್ತೀರಿ? ಮಾನ್ಯ ರವೀಂದ್ರನಾಥ್‌ರವರೆ, ನೀವೇ ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಯಾಗಿರುವುದರಿಂದ ನೀವೇ ಅದರ ಬಗ್ಗೆ ಉತ್ತರ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಇದನ್ನು ಜಿಲ್ಲಾ ಪಂಚಾಯಿತಿಗಳಿಗೆ hand over ಮಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅದೇ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಶಾಸಕರ

ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಗಳನ್ನು ಮಾಡುತ್ತೇವೆ ಎಂದು ಇಲ್ಲಿ ಹೇಳಿದ್ದಾರೆ. ಆದರೆ ಪತ್ರಿಕೆಯಲ್ಲಿ ಈ ರೀತಿ ಹೇಳಿದ್ದಾರೆ. ಇದು ಗೊಂದಲಕ್ಕೆ ಎಡೆಮಾಡಿಕೊಡುತ್ತಿದೆ. ಅಧಿಕಾರಿಗಳಿಗೆ ಇವತ್ತು ಇದನ್ನು ಯಾವ ರೀತಿ ಮಾಡಬೇಕು ಎಂದು ದಿಕ್ಕು ತೋಚುತ್ತಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಕೇವಲ ಆ ಬಗ್ಗೆ ಹೇಳುವುದಲ್ಲ, ತಕ್ಷಣವೇ ಅದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು. ಈಗಾಗಲೇ ಸಿಕ್ಕಾಪಟ್ಟೆ ಸಮಸ್ಯೆಗಳು ಆಗಿ ಬಿಟ್ಟಿದೆ.

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ಇದನ್ನು ಡಿಲೇ ಮಾಡದೆ ಕೂಡಲೇ ಮಾಡಬೇಕು.

ಅಧ್ಯಕ್ಷರು :- ಆಯಿತು. ಇದರ ಬಗ್ಗೆ ಮಾನ್ಯ ಸಚಿವರು ಹೇಳಿಕೆ ಕೊಡುತ್ತಾರೆ.

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು :- Task Force Committee ಗಳನ್ನು ರಚಿಸಬೇಕು ಎಂಬುದು ತಮ್ಮ ಬೇಡಿಕೆಯಲ್ಲವೇ? ಅದನ್ನು ಬಿಟ್ಟು ಇನ್ನೇನು ಸಮಸ್ಯೆ ಇದೆ?

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕುಡಿಯುವ ನೀರಿಗಾಗಿ ಬರೇ 50 ಕೋಟಿ ರೂಪಾಯಿಗಳನ್ನು ಒದಗಿಸುವುದಾಗಿ ತಿಳಿಸಿದ್ದಾರೆ. ಅದು ಸಾಲುವುದಿಲ್ಲ. ದಯಮಾಡಿ ಒಂದೊಂದು ಕ್ಷೇತ್ರಕ್ಕೆ 1 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕು. ಏಕೆಂದರೆ, ಬರ ಭೀಕರವಾಗಿದೆ, ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ಇದೆ. ನಾಡಿದ್ದು assembly ಮುಗಿಯುತ್ತಿದೆ. ಒಂದೊಂದು ಕ್ಷೇತ್ರಕ್ಕೆ ಇಷ್ಟಿಷ್ಟು ಹಣವನ್ನು ಬಿಡುಗಡೆ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಸದನದಲ್ಲಿ ಈಗಲೇ ಹೇಳಬೇಕು. ಅಲ್ಲದೆ ಆ ಹಣವನ್ನು ತಕ್ಷಣದಲ್ಲಿಯೇ ಬಿಡುಗಡೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು :- Task Force Committee ರಚಿಸಬೇಕು ಎಂದು ಎಲ್ಲರೂ ಎದ್ದುನಿಂತುಕೊಂಡು ಹೇಳುತ್ತಾ ಹೋದರೆ ಹೇಗೆ? ನೀವುಗಳು ಹೊಸದಾಗಿ ಹೇಳುವುದೇನೂ ಇಲ್ಲ. Task Force Committee ಗಳನ್ನು ಮಾಡುತ್ತೇವೆ ಎಂದು ಒಪ್ಪಿದ್ದರು, '1 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ', ಇವೆರಡು ಅಂಶಗಳನ್ನು ಬಿಟ್ಟು ಹೊಸದಾಗಿ ಇನ್ನೇನನ್ನು ಹೇಳಲಿಕ್ಕೆ ನೀವು ಹೊರಟಿದ್ದೀರಿ?

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೇ, ಒಂದೇ ಮಾತಿನಲ್ಲಿ ಮುಗಿಸುತ್ತೇನೆ. ದಯಮಾಡಿ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :- ಮಾನ್ಯ ನರೇಂದ್ರಬಾಬುರವರೇ, ತಾವು ಎಷ್ಟೊಂದು ಅವಕಾಶಗಳನ್ನು ತೆಗೆದುಕೊಳ್ಳುತ್ತೀರಿ. ಈ ವಿಚಾರದಲ್ಲೂ ನೀವು ಮಾತನಾಡಬೇಕೇ?

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :- ಇಲ್ಲ. ಬೆಂಗಳೂರು ನಗರದವರಾದ ನಾವು ಪ್ರತಿಯೊಂದು ವಿಷಯದಲ್ಲೂ ಕಡೆಗಣಿಸಲ್ಪಡುತ್ತೇವೆ. ಮೊನ್ನೆ 'ಕುಡಿಯುವ ನೀರಿನ ಬಗ್ಗೆ ಯಲಹಂಕದಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿದೆ, ಅದರಲ್ಲಿ ಬೆಂಗಳೂರಿನ ಶಾಸಕರು ಭಾಗವಹಿಸಬೇಕು' ಎಂದು ನೋಟೀಸ್ ಅನ್ನು ಕಳುಹಿಸಲಾಗಿತ್ತು. ಸ್ವಲ್ಪ ದಿವಸಗಳಾದ ಮೇಲೆ ತಹಸೀಲ್ದಾರ್‌ರವರು ಫೋನ್ ಮಾಡಿ, 'ಸ್ವಾಮಿ, ನಿಮ್ಮದು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿದೆ, ನೀವು ಬರಬೇಕಾಗಿಲ್ಲ' ಎಂದು ಹೇಳಿದರು. ನಾನು ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಬೆಂಗಳೂರು ನಗರದಲ್ಲಿ ಕುಡಿಯುವುದಕ್ಕಾಗಲಿ ಅಥವಾ ಯಾವುದಕ್ಕಾಗಲಿ, ನಾವು ಕೆರೆಯನ್ನು ಅಥವಾ ಅಂತರ್ಜಲವನ್ನು ಅವಲಂಬಿಸುವ ಸ್ಥಿತಿಯಲ್ಲಿ ಇಲ್ಲ. ಬೆಂಗಳೂರು ನಗರದಲ್ಲಿ ನೀರಿನ ಹಾಹಾಕರ ಬಹಳ ಇದೆ. ಇವತ್ತು ಇದರ ಜವಾಬ್ದರಿಯನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವಹಿಸಿ, ಇಲ್ಲವೇ ಜಲ ಮಂಡಳಿಗೆ ಜವಾಬ್ದಾರಿ ವಹಿಸಿ ಅಥವಾ ಎರಡಕ್ಕೂ ಸಂಯುಕ್ತವಾಗಿ ವಹಿಸಿ. ಬೆಂಗಳೂರು ಮಹಾನಗರ ಪಾಲಿಕೆಯ ನೀರಿನ ಸಮಸ್ಯೆ ಬಗ್ಗೆ ದಯವಿಟ್ಟು ತುರ್ತು ಸಭೆಯೊಂದಕ್ಕೆ ಕರೆಯಲಿಕ್ಕೆ ಆದೇಶವನ್ನು ಕೊಡಬೇಕೆಂದು ತಮ್ಮ ಮುಖೇನ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಬೆಂಗಳೂರು ಮಹಾನಗರ ಪಾಲಿಕೆ.....

ಅಧ್ಯಕ್ಷರು :- ಮಾನ್ಯ ಮಂತ್ರಿಗಳೇ, ಉತ್ತರ ಕೊಡಿ. ಮಾನ್ಯ ನರೇಂದ್ರಬಾಬುರವರೇ ದಯಮಾಡಿ ಕುಳಿತುಕೊಳ್ಳಿ. ಎಷ್ಟು ಬಾರಿ ಹೇಳಿದ್ದನ್ನೇ ಹೇಳುತ್ತೀರಿ?

ಶ್ರೀ ಎಸ್.ಎ. ರವೀಂದ್ರನಾಥ್(ಸಕ್ಕರೆ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಎಲ್ಲಾ ಜಿಲ್ಲಾ

ಪಂಚಾಯಿತಿಗಳಲ್ಲಿ ಹಣ ಇದೆ. ಅದಕ್ಕೇನೂ ತೊಂದರೆಯಿಲ್ಲ. ಶಾಸಕರು ಹಣ ಬಿಡುಗಡೆ ಮಾಡಬೇಕು ಎಂದು ಕೇಳುತ್ತಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಇವತ್ತು ಅಥವಾ ನಾಳೆಯೊಳಗೆ, ಅದು ಎಷ್ಟು ಕೊಡುತ್ತಾರೆಂದು ಹೇಳಿ, ಅದನ್ನು ಇಲ್ಲಿ ಘೋಷಣೆ ಮಾಡುವಂಥಾದ್ದನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಕಮಿಟಿ ರಚಿಸುತ್ತೇವೆ ಎಂದು ಭರವಸೆ ನೀಡಿದ್ದರು. ಅದರ ಬಗ್ಗೆ ನಾವು ಕೇಳಿದ್ದೆವು.

ಅಧ್ಯಕ್ಷರು :– ಮಾನ್ಯ ನಾಗರಾಜ್‌ರವರೆ, ಸಂಬಂಧಪಟ್ಟಂತಹ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಇದರ ಬಗ್ಗೆ ಹೇಳುತ್ತೇವೆ ಎಂದು ಹೇಳಿದ್ದಾರೆ. ಅವರೂ ಚರ್ಚೆ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಸಾರ್, ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಬರುತ್ತಾರೆ? ಏನು ಕಥೆ ಇದು?

ಶ್ರೀ ಎಸ್.ಎ. ರವೀಂದ್ರನಾಥ್ :– ಅವರು ಬರುತ್ತಾರೆ.

ಅಧ್ಯಕ್ಷರು :– ಈ ಸದನದ ಸದಸ್ಯರ ಭಾವನೆಗಳ ಬಗ್ಗೆ ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡುತ್ತಾರೆ. ಸಮಿತಿ ರಚಿಸುವುದಾಗಿ ಅವರೇನು ಭರವಸೆ ಕೊಟ್ಟಿದ್ದರೋ, ಅದರ ಬಗ್ಗೆ ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಇದರ ಬಗ್ಗೆ ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಮುಖ್ಯಮಂತ್ರಿಗಳು ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸುವುದಾಗಿ ಸದನದಲ್ಲಿ ಭರವಸೆಯನ್ನೇನು ಕೊಟ್ಟಿದ್ದಾರೆ, ಅದರ ಬಗ್ಗೆ ಇಲ್ಲಿ ಹೇಳಬೇಕು. ನಾನು ಧರಣೀ ಮಾಡುತ್ತಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಇಲ್ಲಿ ಎರಡು ಪ್ರಶ್ನೆ ಇದೆ. ಒಂದು, ಶಾಸಕರ ಅಧ್ಯಕ್ಷತೆಯಲ್ಲಿ Task Force Committee ಗಳನ್ನು ರಚಿಸತಕ್ಕಂಥಾದ್ದು, ಎರಡನೆಯದು, ಹಣ ಬಿಡುಗಡೆ ಮಾಡತಕ್ಕಂಥಾದ್ದು.

(ಗೊಂದಲ)

ಅಧ್ಯಕ್ಷರು :- ಸಂಬಂಧಪಟ್ಟಂತಹ ಸಚಿವರು ಅವರ ಇತಿಮಿತಿಯಲ್ಲಿ ಉತ್ತರಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅದರ ಬಗ್ಗೆ ಪ್ರಸ್ತಾಪಮಾಡುವಿರಂತೆ. ದಯಮಾಡಿ ಈಗ ಕುಳಿತುಕೊಳ್ಳಿ.

(ಗೊಂದಲ)

ಮಾನ್ಯ ನಾಗರಾಜ್‌ರವರೆ, ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಪ್ರಸ್ತಾಪ ಮಾಡುವಿರಂತೆ. ಅವರ limitation ನಲ್ಲಿ ಅವರು ಉತ್ತರ ಕೊಟ್ಟಿದ್ದಾರೆ. ಮತ್ತೆ ಕೇಳಿದರೆ ಅವರು ಸುಮ್ಮನೆ ಅದನ್ನೇ ಹೇಳುತ್ತಾರೆ. ಅದರಿಂದ ಏನೂ ಪ್ರಯೋಜನವಿಲ್ಲ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಇದರ ಬಗ್ಗೆ ಪ್ರಸ್ತಾಪ ಮಾಡಿ. ಈಗ ಪ್ರಸ್ತಾಪಿಸಿದರೆ ಸುಮ್ಮನೆ waste of time ಆಗುತ್ತದೆ. ಆದುದರಿಂದ, ಮಾನ್ಯ ವಾಟಾಳ್ ನಾಗರಾಜ್‌ರವರೆ, ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಹಿಂದಿರುಗಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಉತ್ತರಿಸಲು ಮಾನ್ಯ ಜಗದೀಶ್ ಶೆಟ್ಟರ್‌ರವರು ಇದ್ದಾರೆ. ಅಲ್ಲದೆ ನಮ್ಮ Home Minister ರವರೂ ಸಹ ಇದ್ದಾರೆ. ವಿಶೇಷವಾದಂತಹ ಹಣಕಾಸಿನ ವ್ಯವಸ್ಥೆಯನ್ನು ಮಾಡುವುದಕ್ಕೆ State level ನಲ್ಲಿ Task Force Committee ಅಥವಾ Calamity Relief Committee ಇದೆ, ಅಲ್ಲೇ ಈ ಬಗ್ಗೆ ನಿರ್ಣಯಗಳನ್ನು

ತೆಗೆದುಕೊಳ್ಳುವಂಥಾದ್ದು ಇದೆ. ಕ್ಯಾಬಿನೆಟ್‌ಗೆ ಏನು ಅಧಿಕಾರ ಇದೆ, ಆ ಸಂಪೂರ್ಣವಾದಂತಹ ಅಧಿಕಾರವನ್ನು ನಮ್ಮ ಎಂ.ಪಿ. ಪ್ರಕಾಶ್ ಸಾಹೇಬರಿಗೆ ಕೊಟ್ಟಿದ್ದಾರೆ. So, ಅವರು ಆ sub committee ಯಲ್ಲಿಟ್ಟು, ಹಣ ಬಿಡುಗಡೆ ಮಾಡಬೇಕು. ಅದನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ಬರಲಿ, Finance Minister ರವರು ಬರಲಿ ಎಂದು ಮುಂದಕ್ಕೆ ಹಾಕಿಕೊಂಡು ಹೋದರೆ, ಕೊಡುವುದು ಯಾವಾಗ?

ಅಧ್ಯಕ್ಷರು :-- ಮಾನ್ಯ ಖರ್ಗೆಯವರೆ, Task Force Committee ಗಳನ್ನು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು. ಆ ಕಾರಣದಿಂದ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಎಂ.ಪಿ. ಪ್ರಕಾಶ್‌ರವರು ಇಲ್ಲೇ ಇದ್ದಾರೆ. ಅವರು Sub Committee ಯಲ್ಲಿ ಇದ್ದಾರೆ. ಆ Sub Committee ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಮತ್ತು ಬರಗಾಲ ಕಾಮಗಾರಿ ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ನೋಡುತ್ತಿದೆ. ಇದೆಲ್ಲದರ ಅಧಿಕಾರ ಅವರಿಗಿದೆ. ಆದರೆ ಅವರು ಅದನ್ನು ಚಲಾಯಿಸುತ್ತಿಲ್ಲ.

ಅಧ್ಯಕ್ಷರು :- ಅವರು Task Force Committee ಗಳನ್ನು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟರೆ ನಮಗೂ ಸಂತೋಷವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಅವರಿಗೂ ಕೂಡ ಗೊತ್ತಿದೆ. ಸುಮಾರು ವರ್ಷಗಳ ಕಾಲ ಬರಗಾಲ ನಿರ್ವಹಣೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ ಅವರು ಕೆಲಸ ಮಾಡಿದ್ದಾರೆ. NCCF & CRF ನಿಂದ ನಮಗೆ ಹಣ ಬರುತ್ತದೆ. ಆ ಹಣ ಖರ್ಚು ಮಾಡುವ ಬಗ್ಗೆ ಕೇಂದ್ರ ಸರ್ಕಾರ ಅವರದೊಂದು ಮಾರ್ಗಸೂಚಿಯನ್ನು ಕೊಟ್ಟಿದ್ದಾರೆ. ಆ ಮಾರ್ಗಸೂಚಿಯಲ್ಲಿ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ, ಕೊಳವೆ ಬಾವಿಯನ್ನು ತೆಗೆಸಲಿಕ್ಕೆ ಮಾತ್ರ ನಮಗೆ ಅಧಿಕಾರ ಇದೆಯೇ ವಿನಾ energisation ಗೆ ದುಡ್ಡು ಕೊಡತಕ್ಕಂಥಾದ್ದು ಆಗಲಿ, ಪೈಪ್‌ಲೈನ್ ಹಾಕಿಸುವುದಕ್ಕಾಗಲಿ ಅವರು ನಮಗೆ ದುಡ್ಡು ಕೊಡುತ್ತಿಲ್ಲ. ಆ ಕಾರಣಕ್ಕಾಗಿ ಈ ಸಂದರ್ಭದಲ್ಲಿ ನಾವು ಹೆಚ್ಚು ಹಣವನ್ನು ಕೊಡಬಹುದು. ಆದರೆ ಹಣ ಹೆಚ್ಚು ಕೊಟ್ಟರೂ ಕೂಡ ಅಷ್ಟಕ್ಕೆ ಮಾತ್ರ ಸೀಮಿತವಾಗಿರಬೇಕು. ಈ ಬಗ್ಗೆ ಕೇಂದ್ರ ಸರ್ಕಾರದ ಗಮನವನ್ನು, ಅವರ ಕಾಲದಲ್ಲಿ

ಮತ್ತು ಅವರ ಹಿಂದೆ ಮತ್ತು ನಂತರದ ದಿನವಮಾನಗಳಲ್ಲಿ ಕೂಡ ಈ ಮಾರ್ಗಸೂಚಿಯನ್ನು ಬದಲಿ ಮಾಡಬೇಕೆಂಬ ವಿನಂತಿಯನ್ನೂ ಕೂಡ ಮಾಡಿಕೊಂಡಿದ್ದೇವೆ.

ಮೊನ್ನೆ ತಾನೇ ಈ ವಿಚಾರದಲ್ಲಿ, ನಾವು ರಾಜಕೀಯ ಬೆರೆಸುತ್ತೇವೆಂದು ಅನ್ಯಥಾ ಅವರು ಭಾವಿಸಬಾರದು, ನಿಮಗೆ 74 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆ ಮತ್ತು 54 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ನಮಗೆ ಆದೇಶವನ್ನು ಕಳುಹಿಸಿಕೊಟ್ಟರು. ಅಲ್ಲಿಂದ ಇಲ್ಲಿಯವರೆಗೂ ಕೂಡ ಒಂದು ಕೆ.ಜಿ. ಯಷ್ಟು ಅಕ್ಕಿ ಅಥವಾ ಆಹಾರ ಧಾನ್ಯ ನಮಗೆ ಬಂದಿಲ್ಲ. 74 ಕೋಟಿ ರೂ.ಗಳ ಹಣ ಸಹ ನಮಗೆ ಬಂದಿಲ್ಲ. ಬಂದಿರದ ಕಾರಣ ಇದ್ದಿದ್ದರಿಂದ ನಾವು ಒಂದು ಪ್ರಸ್ತಾವವನ್ನು ಹಣಕಾಸಿನ ಇಲಾಖೆಗೆ ಕಳುಹಿಸಿಕೊಟ್ಟೆವು. Non-CRF ಮೂಲಕವಾಗಿ ಹಣವನ್ನು ನೀವು ಕೊಡಿ ಎಂದು ಅವರಿಗೆ ಕೇಳಿದ್ದೇವೆ. ಏಕೆಂದರೆ ರಾಜ್ಯ ಸರ್ಕಾರದ ಖಜಾನೆಯಿಂದಲೇ ಹಣ ಬರುವುದರಿಂದ, ನಾವು ಕೇಂದ್ರ ಸರ್ಕಾರದ ಬರಗಾಲ ನಿರ್ವಹಣೆಯ ಮಾರ್ಗಸೂಚಿ ಪ್ರಕಾರ ನಡೆದುಕೊಳ್ಳಬೇಕಾದಂತಹ ಅಗತ್ಯವಿಲ್ಲ, ಆದ್ದರಿಂದ ಕನಿಷ್ಟ 100 ಕೋಟಿ ರೂ.ಗಳನ್ನು ನೀವು ನಮಗೆ ಕೊಟ್ಟರೆ, ಮುಂದೆ ಬಂದಾಗ ಅದನ್ನು ಸರಿಪಡಿಸಿಕೊಳ್ಳಬಹುದಾಗಿದೆ ಎಂದು ಹೇಳಿದ್ದೇವೆ. ಒಂದು ವೇಳೆ ಇಲ್ಲದಿದ್ದರೂ ಕೂಡ, ನಮ್ಮ ಸಂಪನ್ಮೂಲಗಳಿಂದ ನಾವು ಕ್ರೋಢಿಕರಿಸಬೇಕಾಗುತ್ತದೆ.

ಬೇರೆ ವಿಷಯಕ್ಕೆ ಬೇಕಾದರೆ ಹಣ ಕೊಡುವುದನ್ನು ಕಡಿಮೆ ಮಾಡಿ, ಇದಕ್ಕೆ ಹಣವನ್ನು ಕೊಟ್ಟೇ ತೀರಬೇಕು ಎಂಬ ನಿರ್ಣಯದ ಮೇಲೆ ನಾವು ಹಣಕಾಸಿನ ಇಲಾಖೆಗೆ ಪ್ರಸ್ತಾವವನ್ನು ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ 50 ಕೋಟಿ ರೂ.ಗಳನ್ನು ಈಗ ಕೊಡಲಿಕ್ಕೆ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಆ 50 ಕೋಟಿ ರೂ.ಗಳು Non-CRF funds ನ ರೀತಿಯಲ್ಲಿ ಬರುತ್ತದೆ. ಈಗ ಪ್ರತಿ ತಾಲ್ಲೂಕಿಗೆ ಎರಡೆರಡು ಕೋಟಿ ರೂ.ಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಕುಡಿಯುವ ನೀರಿನ ನಿಯಮಾವಳಿಗಳನ್ನು ತೆಗೆದು ಹಾಕಿದಾಗ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯತಕ್ಕಂಥ ಯಾವುದಾದರೂ ಸಮಿತಿ ಇದ್ದಾಗ, Task Force Committee ಮಾಡಬೇಕೆಂಬ ದೃಷ್ಟಿಯಲ್ಲಿ, ಆಗ ಅವರಿಗೆ ಸುಲಭವಾಗುತ್ತದೆ. ತತ್‌ಕ್ಷಣದಲ್ಲಿ ಅವರು ಆದೇಶ ಕೊಡಿಸಬಹುದು, ಪೈಪ್‌ಲೈನ್ ಹಾಕಿಸಬಹುದು, energisation ಗೂ ಸಹ ದುಡ್ಡು ಕಟ್ಟಬಹುದು ಅಥವಾ ಅವರು ಕೊಳವೆ ಬಾವಿಗಳನ್ನಾದರೂ ತೆಗೆಸಬಹುದು.

(4 : 30 pm)

ಅಥವಾ ಅವರು ಕೊಳವೆ ಬಾವಿಯನ್ನಾದರೂ ತೆಗೆಸಬಹುದು, ಈ ಕೆಲವೊಂದು ತಾಂತ್ರಿಕ ಕಾರಣಗಳಿಂದ ಕೆಲಸ ನಿಂತಿದೆ. ಇನ್ನು ಉಳಿದಿರತಕ್ಕಂಥದ್ದು, ಟಾಸ್ಕ್ ಫೋರ್ಸ್ ಕಮಿಟಿಗೆ ಯಾರು ಅಧ್ಯಕ್ಷರಾಗಬೇಕೆಂಬ ವಿಚಾರದಲ್ಲಿ ಈಗ ಬದಲಾವಣೆಯಾಗಿದೆ, ಕಮಿಟಿ ಮಾಡಿಲ್ಲ ಎನ್ನುವ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿರುವುದನ್ನು ಕೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಆಗ ಕಮಿಟಿಯನ್ನು ಮಾಡಬೇಕಾದರೆ ಟೈಮ್ ಬೌಂಡ್ ಹಾಕಿ ಇಟ್ಟಿರಿ, ಕಂಟಿನ್ಯು ಮಾಡಲಿಲ್ಲ. ಈಗ ಒಂದು ಫ್ರೆಶ್ ಆದೇಶ ಕೊಡಿ ಎಂದು ನಾವು ಕೇಳುತ್ತಿರುವುದು. ಆ ಕಮಿಟಿಯನ್ನು ಮತ್ತೆ ಪುನಶ್ಚೇತನಗೊಳಿಸಿ ಆಮೇಲೆ ಹಣ ಕೊಡಿ.

ಶ್ರೀ ಕೆ.ಎನ್. ರಾಜಣ್ಣ (ಬೆಳ್ಳಾವಿ) :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸತ್ಯನಾರಾಯಣನವರು ಹಿಂದೆ ಸಚಿವರಾಗಿದ್ದಾಗ ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡಿರುವ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಅದೇನು ಹೊಸದಾಗಿ ಮೊಡಾಲಿಟಿಸ್ ವರ್ಕ್ ಔಟ್ ಮಾಡಬೇಕು, ಬೇರೆ ಬೇರೆ ಯಾರನ್ನೋ ಕೇಳಬೇಕು, ಮಾಡಬೇಕನ್ನುವುದೇನೂ ಇಲ್ಲ. ಅದು expire ಆಗಿದೆ, ಸೇಂ ಅದೆ ಕಮಿಟಿಗಳನ್ನು ಅದೆ ಗೈಡ್‌ಲೈನ್ಸ್‌ನಲ್ಲಿ ಕಾನ್‌ಸ್ಟಿಟ್ಯುಟ್ ಮಾಡುವುದೆಂದು ಮಾಡಿ, ಹಣವನ್ನು ಕೂಡ ಯಾವುದೇ ಸ್ಕೀಂನಲ್ಲಿದ್ದರೂ ಕುಡಿಯುವ ನೀರಿನ ವಿಚಾರದಲ್ಲಿ ಈ ಉದ್ದೇಶಕ್ಕೆ ಉಪಯೋಗಿಸಕೊಳ್ಳಬಹುದೆಂದು ಹಿಂದೆ ಒಂದು circular ಕೂಡ ಕೊಟ್ಟಿದ್ದರು. ಅದನ್ನು ಸಬ್ಸಿಕ್ವೆಂಟ್ ಆಗಿ ವಿತ್‌ಡ್ರಾ ಮಾಡಿಕೊಂಡರು. 25th February ನಲ್ಲಿ ಇಶ್ಯೂ ಮಾಡಿದಂತೆ ಒಂದು circular ಇದೆ. ಮತ್ತೆ ಅದೇ ರೀತಿ ಒಂದು circular ಹಾಕಿ, ಹಾಗೆ ಇದ್ದಂತಹ ಟಾಸ್ಕ್‌ಫೋರ್ಸ್ ಕಮಿಟಿಯನ್ನು ರಿವೈವ್ ಮಾಡಿದರೆ ಆಗುತ್ತದೆ. ಇಲ್ಲವೆಂದರೆಮ ನಾವು ಬರಗಾಲ ಬಂದಂತಹ ಸಮಯದಲ್ಲಿ ಅವರಿಗೆ ಸಹಾಯ ಮಾಡದೇ ಯಾವುದೋ ಕಾಲದಲ್ಲಿ ಮಾಡಿದರೆ ಏನು ಪ್ರಯೋಜನವಾಗುತ್ತದೆ? ಈಗ ಸಕಾಲವಿದೆ, ಈಗ ಮಾಡುವುದು ಈಗಾಗಲೇ ನಿಧಾನವಾಗಿದೆ.

ಇನ್ನೊಂದು ವಿಷಾದದಿಂದ ಹೇಳುವ ವಿಚಾರವೇನೆಂದರೆ, ಸದನದಲ್ಲಿ ಸಚಿವರು ಭರವಸೆಯನ್ನು ಕೊಟ್ಟು ಆಗಲೆ 15 ದಿವಸಗಳಾದರೂ ಕೂಡ ಇನ್ನೂ

ಟಾಸ್ಕ್ ಫೋರ್ಸ್ ಕಮಿಟಿ ರಚನೆಯಾಗಲಿಲ್ಲವೆಂದರೆ, ಏನು ಅಧಿಕಾರಗಳಿದ್ದಾರಾ, ಸರ್ಕಾರವಿದೆಯಾ ಎಂದು ಜನರು ಪ್ರಶ್ನೆ ಮಾಡಿದರೆ ನಾವು ಏನು ಉತ್ತರವನ್ನು ಹೇಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇದು ಏಪ್ರಿಲ್ ತಿಂಗಳು, ಏಪ್ರಿಲ್ ಮತ್ತು ಮೇ ಈ ಎರಡು ತಿಂಗಳೆ ಬಹಳ ಮುಖ್ಯವಾದುದು, ಜೂನ್ ತಿಂಗಳಿನಲ್ಲಿ ಮಳೆ ಬರುತ್ತದೆ. ಈಗ ಪ್ರಕಾಶ್‌ರವರು ಹೇಳುವುದನ್ನು ನೋಡಿದರೆ, ನಿಜವಾಗಿಯೂ ಅವರಿಗೆ ಕ್ಯಾಬಿನೆಟ್‌ನಲ್ಲಿ ಸಹಕರಿಸುತ್ತಿಲ್ಲವೆನ್ನುವುದು ಗೊತ್ತಾಗುತ್ತದೆ, ಇಲ್ಲ ಕಾರ್ಯದರ್ಶಿಗಳು ಮಿಸ್‌ಗೈಡ್ ಮಾಡುತ್ತಿರುವುದು ಗೊತ್ತಾಗುತ್ತದೆ. ಏಕೆಂದರೆ, ನಿಮಗೆ ಒಂದು ರೆಸಲೂಷನ್ ಪಾಸ್ ಮಾಡಿ, ನಿಮ್ಮ ಅಧ್ಯಕ್ಷತೆಯಲ್ಲಿರುವ ಸಬ್ ಕಮಿಟಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟ ಮೇಲೆ ಯಾವುದೇ ಇಲಾಖೆಯಲ್ಲಿ ದುಡ್ಡಿದ್ದರೆ, ಅದನ್ನು ನೀವು ಆ ಸಬ್–ಕಮಿಟಿಯಲ್ಲಿ ನೀವು ಪಾಸ್ ಮಾಡಿಕೊಂಡು ಈ ಒಂದು ಕೆಲಾಮಿಟಿ ರಿಲೀಫ್‌ಗೆ ಅದು ಕುಡಿಯುವ ನೀರಿಗೆ ಇರಬಹುದು, ಕೆಲಸಕ್ಕೆ ಇರಬಹುದು, ಎಲೆಕ್ಟ್ರಿಸಿಟಿಗೆ ಇರಬಹುದು. ಈವನ್ ವಿದ್ಯುತ್ಶಕ್ತಿಗೂ ಕೂಡ ನಾವು ದುಡ್ಡನ್ನು ಕೊಟ್ಟಿದ್ದೇವೆ, ಹಾಗು ಕೆಲಸಕ್ಕೂ ಕೊಟ್ಟಿದ್ದೇವೆ. ಹಣವಿಲ್ಲವೆಂದರೆ, ಮೊದಲು ಹಣಕಾಸಿನ ಇಲಾಖೆಯಿಂದ ತೆಗೆದುಕೊಂಡು ಕೇಂದ್ರ ಸರ್ಕಾರದಿಂದ ಬಂದರೆ ರಿ–ಅಡ್ಜೆಸ್ಟ್‌ಮೆಂಟ್ ಮಾಡಿದ ಉದಾಹರಣೆ ಕೂಡ ಇದೆ.

ಎರಡನೆಯದಾಗಿ ಒಂದು ವೇಳೆ ಕೇಂದ್ರ ಸರ್ಕಾರದಿಂದ ಬರಲಿಲ್ಲವೆಂದು ತಿಳಿದುಕೊಳ್ಳಿ, ನಾವು ಇಲ್ಲಿ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? You stop other works, get money and start the work. ಅದನ್ನು ಬಿಟ್ಟು ಆ ಹಣಕಾಸಿನ ಇಲಾಖೆಯವರು ಕೊಡಲಿಲ್ಲ, ಮುಖ್ಯಮಂತ್ರಿಗಳು ಕೊಡಲಿಲ್ಲವೆಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ :– ಕೇಂದ್ರ ಸರ್ಕಾರದವರು ಕೊಡಲಿಲ್ಲವೆಂದು ಹೇಳಿದ್ದು, ಹಣಕಾಸು ಇಲಾಖೆಯವರು ಕೊಡಲಿಲ್ಲವೆಂದು ಹೇಳಲಿಲ್ಲ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಸಣ್ಣಪುಟ್ಟ ಕೆಲಸಕ್ಕೆ ಡಿವಿಯೇಷನ್ ಮಾಡುವ ಅಧಿಕಾರ ನಿಮಗಿದೆ, ನೀವು ರೆಸಲೂಷನ್ ಮಾಡುವ ಅಗತ್ಯವಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಸರ್ ನಮಗೆ, ನಿಮ್ಮ ಕಾಲದಲ್ಲಿದ್ದಂತಹ ನಿಯಮಾವಳಿಗಳು ಹೇಗಿದ್ದಾವೋ ಅದೇ ರೀತಿಯಾದ ನಿಯಮಾವಳಿಗಳು ಈಗಲು ಇದ್ದಾವೆ. ರೆಸಲೂಷನ್ ಮಾಡಬೇಕಾದ ಅಗತ್ಯವೂ ಇಲ್ಲ. ತಮಗೆ ಹೇಳಬೇಕಾದರೆ, ನಾವಿರತಕ್ಕಂತಹ ಕ್ಯಾಬಿನೆಟ್‌ನಲ್ಲಿ ರೆಸಲೂಷನ್ ಅಲ್ಲ ನಿರ್ಧಾರ ಮಾಡಿದರೂ ಸಾಕಾಗುತ್ತದೆ. ಈಗ 50 ಕೋಟಿ ರೂಪಾಯಿಗಳನ್ನು ಅಥವಾ 100 ಕೋಟಿ ರೂಪಾಯಿಗಳನ್ನು ಕೊಡಬೇಕೆನ್ನುವ ಪ್ರಸ್ತಾವವನ್ನು ಹಣಕಾಸಿನ ಇಲಾಖೆಗೆ ಕಳುಹಿಸಿದ್ದೇವೆ. ನಮಗೆ ಬಂದಿರುವ ಸಂಕಟ ಕೇಂದ್ರ ಸರ್ಕಾರದಿಂದ 74 ಕೋಟಿ ರೂಪಾಯಿಗಳು ಹಾಗೂ 50 ಸಾವಿರ ಮೆಟ್ರಿಕ್ ಟನ್ ಆಹಾರವನ್ನು ಕೊಡುತ್ತೇವೆಂದು ಹೇಳಿ, ಎರಡು ತಿಂಗಳು ಹಿಂದೆ ಕಳುಹಿಸಿದ ಕಮ್ಯೂನಿಕೇಷನ್ ಇದ್ದ ಮೇಲೆ, ಇವತ್ತಿನವರೆವಿಗೂ ಒಂದೂ ಕಾಳು ಆಹಾರಧಾನ್ಯವನ್ನು ಕಳುಹಿಸಿಲ್ಲ. ಕೇಂದ್ರ ಸರ್ಕಾರವೆಂದರೆ ನಿಮ್ಮದೆಂದು ಏತಕ್ಕೆ ಭಾವಿಸುತ್ತೀರಿ, ಕೇಂದ್ರ ಸರ್ಕಾರ ನಮ್ಮದೇ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರ ಮೇಲೆ ಏತಕ್ಕೆ ಹಾಕುತ್ತೀರಿ, ನೀವು ಕೊಡಿ, ಅಲ್ಲಿಂದ ದುಡ್ಡನ್ನು ಆಮೇಲೆ ತಂದರಾಯಿತು, ನೀವು ಅವರ ಮೇಲೆ ಅಜಿಟೇಷನ್ ಮಾಡಿ, but you have to solve this problem.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :- ಏಕೆ ಅವರ ಮೇಲೆ ಹಾಕುತ್ತೇವೆಂದು ಹೇಳುತ್ತೀರಿ? ಅಜಿಟೇಷನ್ ಮಾಡುವುದನ್ನು ನಿಮ್ಮಿಂದ ಕಲಿಯಬೇಕಾದ್ದಿಲ್ಲ ಸರ್, ನಾನು ಹೇಳಿದ ವಿಚಾರವನ್ನು ರಾಜಕೀಯ ಮಾಡಿದ್ದೇನೆಂದು ದಯವಿಟ್ಟು ತಾವು ತಪ್ಪು ತಿಳಿದುಕೊಳ್ಳಬಾರದು, ನಾನು ಹೇಳಿರುವುದು ಸುಳ್ಳಾದರೆ ನಾಳೆಯೇ ನಾನು ರಾಜೀನಾಮೆಯನ್ನು ಕೊಡುತ್ತೇನೆ. ಕಮ್ಯುನಿಕೇಷನ್ ಕಳುಹಿಸಿ ಎರಡು ತಿಂಗಳಾಯಿತು, ಬನ್ನಿ ಸರ್, ನೀವು ಪತ್ರ ಬರೆಯಿರಿ. ಅವರಿಗೆ ಕಮ್ಯುನಿಕೇಷನ್ ಮಾಡಿ ಎರಡು ತಿಂಗಳಾದರೂ 74 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ, ಆದರೂ ಸಹ ಅವರನ್ನು ಕೇಳಿದ್ದೇವೆ. ಈಗ ಅವರು 74 ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ನಾವು ಎರಡು ತಿಂಗಳ ಹಿಂದೆಯೇ ಅವರಿಗೆ ಕಮ್ಯುನಿಕೇಟ್ ಮಾಡಿದ್ದೇವೆ. ನಮಗೆ 50 ಸಾವಿರ ಮೆಟ್ರಿಕ್ ಟನ್ ಆಹಾರಧಾನ್ಯ ಕೊಡುತ್ತೇವೆಂದು ಹೇಳಿದರು.

ಕೇಂದ್ರ ಸರ್ಕಾರದವರು ಕಳುಹಿಸಿಲ್ಲವೆಂದಾಕ್ಷಣ ಅತಿ ಸೂಕ್ಷ್ಮವಾಗುವುದಾಗಲಿ, ಕಾಂಗ್ರೆಸ್‌ನವರಿಗೆ ನಮ್ಮದೇ ಕೇಂದ್ರ ಸರ್ಕಾರವೆನ್ನುವುದೇಕೆ, ಅದು ನಮ್ಮ ಸರ್ಕಾರವು

ಕೂಡ ಹೌದು. ನಾವು ಮತ್ತು ಮುಖ್ಯಮಂತ್ರಿಗಳು ಈ ಅಧಿವೇಶನ ಮುಗಿದ ತಕ್ಷಣ ಸರ್ವಪಕ್ಷಗಳ ಮುಖಂಡರುಗಳನ್ನು ಕರೆದುಕೊಂಡು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರುತ್ತೇವೆ ಎನ್ನುವ ಮಾತನ್ನು ಮೊನ್ನೆ ಕೂಡ ಮಾತನಾಡಿದ್ದೇನೆ, ತಮಗೆ ಗೊತ್ತಿದೆ. ಆದರೆ ಅದರಿಂದ ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳುವ ಅಗತ್ಯವಿಲ್ಲ. ನಾವು ನೂರು ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ನೂರು ಕೋಟಿ ರೂಪಾಯಿಗಳ ಪ್ರಶ್ನೆ ಏತಕ್ಕೆ ಬರುತ್ತದೆಂದರೆ, CRF ನಿಂದ ಕೊಡುತ್ತೇವೆಂದು ಹಣಕಾಸಿನ ಇಲಾಖೆಯವರು ಹೇಳಿದರು. CRF ನಿಂದ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲವೆಂಬುದು ತಮಗೆ ಗೊತ್ತಿದೆ. CRF ನ ಗೈಡ್‌ಲೈನ್ಸ್ ಅನ್ನು ನಾವು ಇಟ್ಟುಕೊಂಡರೆ, ಕೇವಲ ನಾವು ಕೊಳವೆ ಬಾವಿ ತೆಗೆಸಿದ್ದಕ್ಕೆ ಮಾತ್ರ ಹಣ ಕೊಡಬಹುದು ವಿನಃ ಪೈಪ್‌ಲೈನ್ ಹಾಕುವುದಕ್ಕೆ ಹಣ ಕೊಡುವುದಕ್ಕಾಗುವುದಿಲ್ಲ, ಎನರ್ಜೈಷನ್‌ಗೆ ಹಣ ಕೊಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಹಣವನ್ನು ಇಲ್ಲಿ ಬಳಸದೇ ಇರುವುದರಿಂದ, ನೀವು Non-CRF ನಿಂದ ಹಣ ಕೊಡಿ ಎಂದು ನಾವು ಅವರಿಗೆ ಪ್ರಸ್ತಾವವನ್ನು ಕಳುಹಿಸಿಕೊಟ್ಟಿದ್ದೇವೆ.

ಪ್ರಸ್ತಾವ ಕಳುಹಿಸಿಕೊಟ್ಟಾಗಲು ಅಲ್ಲಿಂದ ಪತ್ರವ್ಯವಹಾರ ನಡೆಯುತ್ತಿರುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿಗಳು 50 ಕೋಟಿ ರೂಪಾಯಿಗಳನ್ನು ಈ ಕೂಡಲೇ ಬಿಡುಗಡೆ ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಆದುದರಿಂದ ನಾವು ಯಾವುದೇ ಮೂಲದಿಂದಾಗಲಿ ಕುಡಿಯುವ ನೀರಿನ ವಿಚಾರದಲ್ಲಿ ಮಾತ್ರ ಸರ್ಕಾರ ಖಂಡಿತವಾಗಿ ಸ್ಪಂದಿಸುತ್ತದೆ. ಆಕಸ್ಮಾತ್ ಕುಡಿಯುವ ನೀರಿಗೆ ಸಮಸ್ಯೆಗಳಿಗೆ ಅದು ಪ್ರತಿಸ್ಪಂದಿಸದಿದ್ದರೆ ಅದು ನಾಗರೀಕ ಸರ್ಕಾರವೇ ಅಲ್ಲ, ಅದಕ್ಕೆ ಒಂದು ನಿಮಿಷವು ಕೂಡ ಅಧಿಕಾರದಲ್ಲಿರುವುದಕೆ ಅರ್ಹತೆ ಇಲ್ಲ. ಮಾಡಿರತಕ್ಕಂತಹ ವಿಧಾನದಲ್ಲಿ ವಿಳಂಬವಾಗಿರಬಹುದು ಅಥವಾ ಕೊಟ್ಟಿಲ್ಲವೆನ್ನದಿರಬಹುದು. ಅದರ ಜೊತೆಗೆ ಈಗ ಟಾಸ್ಕ್‌ಫೋರ್ಸ್ ಪ್ರಶ್ನೆ ಬಂದಾಗ Non-CRF ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಡುವುದರಿಂದ ಅಲ್ಲಿಯ ಶಾಸಕರು, ಒಂದು ಕ್ರಿಯಾಯೋಜನೆಯನ್ನು ತಯಾರು ಮಾಡುವ ಮತ್ತು ಮಂಜೂರು ಮಾಡುವ ಅಧಿಕಾರವನ್ನು ನಾವು ಕೊಡುತ್ತೇವೆ, ನಾವು ಕೇಂದ್ರ ಸರ್ಕಾರದ ಮೇಲೆ ಅವಲಂಬಿತವಾಗುವ ಅಗತ್ಯವಿಲ್ಲ. ಒಂದು ಕಡೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ನಾವೇನಾದರೂ ಮಾತನಾಡಿದ ತಕ್ಷಣವೇ ಇತ್ತೀಚೆಗೆ ಬಹಳ ಸೂಕ್ಷ್ಮವಾಗುತ್ತಾರೆ.

ಈಗ ಮಣಿಶಂಕರ್ ಅಯ್ಯರ್ ಅಂತಹವರು, ಜಿಲ್ಲಾ ಪಂಚಾಯತ್ ಅಧಿಕಾರವನ್ನು ಮೊಟಕುಗೊಳಿಸುವ ಪ್ರಯತ್ನವನ್ನು ಮಾಡಬೇಡಿ, ಆಕಸ್ಮಾತ್ ನೀವು ಮಾಡುವುದಾಗಿದ್ದರೆ ನಿಮಗೆ ಕೊಡುವ ಅನುದಾನವನ್ನು ಕತ್ತರಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಈ ಎಲ್ಲಾ ಹಿನ್ನಲೆಯಲ್ಲಿ ಬೇಲೂರು ಅಧಿವೇಶನ ನಿರ್ಧಾರಗಳು ಬರುತ್ತವೆ. ಕುಡಿಯುವ ನೀರು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವಿಚಾರ. ಆದರೆ ಬರಗಾಲಕ್ಕೆ ಸಂಬಂಧಪಟ್ಟಿರತಕ್ಕಂತಹದ್ದು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ,. ಸನ್ಮಾನ್ಯ ರವೀಂದ್ರರವರು ನಿಮ್ಮೊಡನೆ ಮಾತನಾಡಿ, ನಾಳೆಯೇ 50 ಕೋಟಿ ರೂಪಾಯಿಗಳ ಬಗ್ಗೆ ಆಜ್ಞೆ ಹೊರಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಮತ್ತೆ 50 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು, ಯಾವುದೇ ಸಂದರ್ಭದಲ್ಲಿಯೂ ಕೂಡ ಹಣದ ಕೊರತೆಯಿಲ್ಲದ ರೀತಿಯಲ್ಲಿ ನಾವು ಖಂಡಿತವಾಗಿ ಆ ಕೆಲಸವನ್ನು ಮಾಡುತ್ತೇವೆ, ತಮ್ಮ ಮಾರ್ಗದರ್ಶನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) :- ಮಾನ್ಯ ಅಧ್ಯಕ್ಷರೆ, ಸತ್ಯನಾರಾಯಣರವರು ಮಂತ್ರಿಯಾಗಿದ್ದಾಗ ಈ ರೀತಿ ಬರಗಾಲ ಬಂದಾಗ, ಕುಡಿಯುವ ನೀರಿನ ಸಮಸ್ಯೆ ಬಂದಾಗ, ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡುವುದಕ್ಕೆ MLA ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಮಾಡಿ ಅಧಿಕಾರವನ್ನು ಕೊಡಲಾಗಿತ್ತು. ಪ್ರಶ್ನೆ ಏನೆಂದರೆ, ಟಾಸ್ಕ್ ಫೋರ್ಸ್ ಅನ್ನು ಅವರು ಮಾಡಬೇಕು, ಇಲಾಖೆಯವರು ಮಾಡಬೇಕು, ಅವರು ಮಾಡಲೆಂದು ಹೇಳುತ್ತೀರಿ. ಅದನ್ನು ನಾಳೆಯೇ ಮಾಡಿಸಿ, ದುಡ್ಡನ್ನು ಕೂಡ ಕೂಡಲೇ ಬಿಡುಗಡೆ ಮಾಡಿ. ಏಕೆಂದರೆ ಕುಡಿಯುವ ನೀರಿನ ಬಹಳ ಸಮಸ್ಯೆ ಇದೆ. ಕೇಂದ್ರ ಸರ್ಕಾರ ಆದೇಶ ಕಳುಹಿಸಿದ್ದರೆ ಅಲ್ಲಿ ಕುಳಿತುಕೊಂಡು ದುಡ್ಡು ಬಿಡುಗಡೆ ಮಾಡಿಸಿಕೊಂಡು ಬನ್ನಿ. ಕೇಂದ್ರ ಸರ್ಕಾರವು ಕೊಡಬೇಕು. ಕೊಡಬಾರದೆಂದು ನಾವು ಹೇಳುವುದಿಲ್ಲ, ಕೇಂದ್ರ ಸರ್ಕಾರದಿಂದಲೂ ಬರಬೇಕು, ನಾವು ಕೂಡ ಒತ್ತಾಯ ಮಾಡುತ್ತೇವೆ. ಏಕೆಂದರೆ, ಇಂತಹ ಕೆಲಾಮಿಟಿ ಬಂದಾಗ, ಕುಡಿಯುವ ನೀರಿಗೆ ತೊಂದರೆ ಬಂದಾಗ, ಜನರಿಗೆ ಕೆಲಸ ಕೊಡಬೇಕಾದ ಪರಿಸ್ಥಿತಿ ಬಂದಾಗ ಕೇಂದ್ರ ಸರ್ಕಾರವು ಕೂಡ ಸಹಾಯಕ್ಕೆ ಬರಬೇಕಾಗುತ್ತದೆ. ಹಾಗೆಂದು ಅವರನ್ನೇ ನಂಬಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಹೆಚ್ಚಿನ ಹಣವನ್ನು ಮಹಾರಾಷ್ಟ್ರಕ್ಕೆ ಬಿಡುಗಡೆ ಮಾಡಿದ್ದಾರೆ, ಒಪ್ಪಿತವಾದ 74 ಕೋಟಿ ರೂಪಾಯಿಗಳಲ್ಲಿ ಒಂದು ರೂಪಾಯಿಯನ್ನೂ

ನಮ್ಮ ರಾಜ್ಯಕ್ಕೆ ಕೊಟ್ಟಿಲ್ಲ.

ಶ್ರೀ ಸಿದ್ಧರಾಮಯ್ಯ :– ಕೇಂದ್ರ ಸರ್ಕಾರಕ್ಕೆ ಹೋಗಿ, ಮಹಾರಾಷ್ಟ್ರಕ್ಕೆ ಕೊಟ್ಟಿದ್ದೀರಿ, ಆಂಧ್ರ ಪ್ರದೇಶಕ್ಕೆ ಕೊಟ್ಟಿದ್ದೀರಿ ಕರ್ನಾಟಕಕ್ಕೆ ಕೊಟ್ಟಿಲ್ಲವೆಂದು ಕನ್ವಿನ್ಸ್ ಮಾಡಿ, ನಮ್ಮನ್ನು ಕರೆದುಕೊಂಡು ನಡೆಯಿರಿ ನಾವು ಬರುತ್ತೇವೆ, ಕುಡಿಯುವ ನೀರಿಗೆ ಹಣ ಕೊಡಬೇಡಿ ಎಂದು ಹೇಳುತ್ತೇವೆಯೆ? ನಾವೇನು ಹೇಳುವುದೇನೆಂದರೆ ಬಜೆಟ್‌ನಲ್ಲಿ ಯಡಿಯೂರಪ್ಪನವರು ದುಡ್ಡು ತುಂಬಿತುಳುಕುತ್ತದೆಂದು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :– ಕೇಂದ್ರ ಸರ್ಕಾರದವರಿಗೂ 20,000 ಕೋಟಿ ರೂಪಾಯಿಗಳಷ್ಟು ಹಣ ಬಂದಿದೆ. ಅಲ್ಲಿ ಕೂಡ ತುಂಬಿ ತುಳುಕುತ್ತಿದೆ.

ಶ್ರೀ ಸಿದ್ಧರಾಮಯ್ಯ :– ಇಲ್ಲಿ ತುಂಬು ತುಳುಕುತ್ತಿದೆ ಎಂದು ಅವರು ಹೇಳಲಿಲ್ಲ. 20, 000 ಕೋಟಿ ರೂಪಾಯಿ ಕಳೆದ ವರ್ಷಕ್ಕಿಂತ ಈ ವರ್ಷಕ್ಕೆ ಹೆಚ್ಚಾಗಿದೆ ನಿಜ. ಇವರು ನನ್ನ ಕಾಲದಲ್ಲಿ ಹಣ ತುಂಬಿ ತುಳುಕುತ್ತಿದೆ ಎಂದು ಹೇಳಿದರು. ಅದು ಸೋರೊ ಹೋದೀತು, ಅದನ್ನು ಎತ್ತಿಕೊಳ್ಳಿ ಎಂದು ಹೇಳಿದ್ದು.

ಶ್ರೀ ಬಿ. ಸತ್ಯ ನಾರಾಯಣ :– ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ನಾನು ಈ ಖಾತೆಯನ್ನು ವಹಿಸಿಕೊಂಡಾಗ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಮಾಡಲಿಕ್ಕೆ ಅವಕಾಶವಾಯಿತು. ಈಗ ಪರಿಸ್ಥಿತಿ ನೋಡಿದರೆ ನಮ್ಮ ಮಂತ್ರಿಗಳು ಹೇಳುವ ಸಲಹೆಗಳು ನೋಡಿದರೆ ಜಿಲ್ಲಾಪಂಚಾಯಿತಿಗೆ ಅಷ್ಟು ಟಾಸ್ಕ್ ಫೋರ್ಸ್‌ಗೆ ಇಷ್ಟು ಎಂದು ಈ ರೀತಿ ವಿಭಾಗ ಮಾಡಿ ಕೊಡುವುದರಿಂದ ಯಾವುದೇ ತಾರತಮ್ಯ ನಿವಾರಣೆ ಆಗುವುದಿಲ್ಲ. ಅವರು ಒಂದು ಕಡೆ ಇವರು ಒಂದು ಕಡೆ ಎಳೆದಾಡುತ್ತಾರೆ. ಕುಡಿಯುವ ನೀರಿಗಾಗಿ ಬರತಕ್ಕಂತಹ ಎಲ್ಲ ಹಣವನ್ನು ಟಾಸ್ಕ್ ಫೋರ್ಸ್ ಮುಖಾಂತರ ಮಾಡಿದರೆ ಮಾತ್ರ solve ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಂಚಿಕೆ ಮಾಡಿ ವಿಭಾಗ ಮಾಡಿದರೆ ಸಾಧ್ಯವಾಗುವುದಿಲ್ಲ. ನಾವು ನಮ್ಮ ಊರುಗಳಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು :– ದಯವಮಾಡಿ ಕುಳಿತುಕೊಳ್ಳಿ. ನಾಳೆ ಅವಕಾಶ ಮಾಡಿಕೊಡುತ್ತೇನೆ.